ಶ್ರೀ ವಾಟಾಳ್ ನಾಗರಾಜ್.—ಮೊನ್ನೆ ದಿವಸ ತಾವು ಇಲ್ಲಿಗೆ ಫುಡ್ ಮಿನಿಸ್ಟರು ಹಾಗೂ ಮುಖ್ಯಮಂತ್ರಿಗಳು ಬರುತ್ತಾರೆಂದು ತಿಳಿಸಿದ್ದಿರಿ. ಅದರಂತೆ ಬರಲೇ ಇಲ್ಲ. ಇದರಿಂದ ಅವರು ಬರುತ್ತಾರೋ ಇಲ್ಲವೋ ಎನ್ನುವ ಅನುಮಾನ ನಮಗೆ ಬರುತ್ತಿದೆ.

ಅಧ್ಯಕ್ಷರು.—ನಿಮಗೆ ಯಾವಾಗಲೂ ಅನುಮಾನವೇ ಬರುತ್ತಿರುವುದು.

Alleged murder of one Kari Gowda at Nagamangala

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸುಮಾರು ಐದು ಗಂಟೆ ವೇಳೆಯಲ್ಲಿ ನಾಗಮಂಗಲದಲ್ಲಿರುವ ಪೋಲೀಸು ಸ್ಟೇಷನ್ನಿಗೆ ಕರೀಗೌಡ ಎನ್ನುವವರನ್ನು ಕರಿಸಿ ಅಲ್ಲಿರುವ ಪೋಲೀಸು ಇನ್‌ಸ್ಪೆಕ್ಟರವರು ಅವರನ್ನು ಕೊಲೆ ಮಾಡಿದ್ದಾರೆ, ನಿನ್ನೆ ಅವರನ್ನು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದರು ಎಂದು ತಮಗೆ ನೋಟೀಸು ಕಳುಹಿಸಿದ್ದೆ. ಇಂದು ಅವರ ಹೊಡೆತದಿಂದಾಗಿ ಆ ಮನುಷ್ಯ ಇಂದು ಸತ್ತಿದ್ದಾನೆ, ಇದರಿಂದಾಗಿ ಅಲ್ಲಿದ್ದ ಜನರು ಗುಂಪುಸೇರಿದರು ಎಂದು ಅವರ ಮೇಲೆ ಪೋಲೀಸಿನವರು ಗುಂಡು ಹಾರಿಸಿದ್ದಾರೆ. ಇದರಿಂದ ಇಲ್ಲಿನ ಜನ ಕಂಗಾಲಾಗಿದ್ದಾರೆ. ನಿನ್ನೆ ಸಂಜೆ ಬಲವಂತದಿಂದ ಇಲ್ಲಿನ ಪೋಲೀಸು ಠಾಣೆಗೆ ಕರೀಗೌಡ ಎನ್ನುವವರನ್ನು ಕರೆದುಕೊಂಡು ಹೋಗಿ ಹೊಡೆದು ಇಲ್ಲಿನ ಪೋಲೀಸು ಇನ್‌ಸ್ಪೆಕ್ಟರವರು ಕೊಲೆಮಾಡಿದ್ದಾರೆಂದು ಇಂದು ನನಗೆ ತಂತಿ ಕೂಡ ಬಂದಿದೆ, ಇದರಿಂದ ಜನ ಇಲ್ಲಿ ಸುಖವಾಗಿ ಜೀವನ ಮಾಡಲಾಗುತ್ತಿಲ್ಲ. ಪೋಲೀಸರ ಕಾಟ ತಡೆಯಲಾಗುತ್ತಿಲ್ಲ. ಇಂದು ನಮ್ಮ ರಾಜ್ಯದ ಮಂತ್ರಿಮಂಡಲ ಉರಳಿ ಹೋಗುತ್ತೆ ಎಂದು ಇದಕ್ಕೆ ಸಂಬಂಧಪಟ್ಟ ಖಾತೆಮಂತ್ರಿಗಳು ಈ ಸಭೆಗೂ ಬರಲಿದೇ ಎಲ್ಲೆಲ್ಲೋ ಹೋಗುತ್ತಿದ್ದಾರೆ. ಇಂತಹವರ ಕೈಯಲ್ಲಿ ರಾಜ್ಯ ಕೊಟ್ಟರೆ ಇವರಿಂದ ಜನಕ್ಕೆ ಏನು ಸುಖವಾಗುತ್ತಿಲ್ಲ. ಇದರ ಬಗ್ಗೆ ಸರಕಾರದವರು ಕೂಡಲೇ ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡಿ ತಾವು ಹೇಳಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

Absence of Some Ministers

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ, ಈ ಸಭೆಯಲ್ಲಿ ಜೀರೋ ಅವರಿನಲ್ಲಿ ನಾನಾಗಲೀ ಇಲ್ಲವೇ ಶ್ರೀ ನಾಗರಾಜರಾಗಲೀ ಅಥವಾ ಬೇರೆ ಸದಸ್ಯರೇ ಆಗಲಿ ಕೆಲವು ಮುಖ್ಯವಾದ ವಿಚಾರಗಳನ್ನು ಇಲ್ಲಿ ಹೇಳುವಾಗ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇಲ್ಲದೇ ಇದ್ದರೆ ಹೇಗೆ? ನಾನಾಗಲೇ ಹೇಳಿದೆ ಇಲ್ಲಿ ಫುಡ್ ಮಿನಿಸ್ಟರ್‌ರವರ ಗಮನಕ್ಕೆ ಕೆಲವು ವಿಚಾರಗಳನ್ನು ತಂದೆ ಹಾಗೇ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಯ್ಯನವರು ಪೋಲೀಸರಿಂದ ಕೊಲೆಯಾಗಿದೆ ಎಂದು ಹೇಳಿದರು. ತಾವೇನೋ ಸಂಬಂಧಪಟ್ಟ ಮಂತ್ರಿಗಳು ಬರಲಿ ಆಗ ಇದರ ಬಗ್ಗೆ ಹೇಳಿಕೆ ಕೊಡುವುದರ ಬಗ್ಗೆ ಹೇಳಬಹುದು ಎನ್ನುತ್ತೀರಿ. ಆಹಾರದ ಸಚಿವರು ಇಂದು ಇಲ್ಲೇ ಇದ್ದಾರೆ ಎಂದರೆ, ನಾನು ಬಂದಾಗಿನಿಂದ ಅವರನ್ನು ಇಲ್ಲಿ ಕಾಣಲೇ ಇಲ್ಲ.

ಅಧ್ಯಕ್ಷರು.—ಮಾನ್ಯ ಆಹಾರ ಮಂತ್ರಿಗಳು ಇದುವರೆಗೆ ಇಲ್ಲೇ ಇದ್ದರು. ಇದಕ್ಕೆ ತಮಗೆ ಸಾಕ್ಷಿ ಒದಗಿಸಿ ಯಾರ ಕೈಯಲ್ಲಾದರೂ ಹೇಳಿಸಬೇಕೇನು? ಈಗ ಕೌನ್ಸಿಲ್ ಅಧಿವೇಶನಕ್ಕೆ ಹೋಗಿರಬಹುದು. ಅಲ್ಲೂ ಸಭೆ ನಡೆಯುತ್ತಿರುವುದು ತಮಗೆ ಗೊತ್ತಿರಬಹುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ಬಹಳ ಬೇಜವಾಬುದಾರಿಯಿಂದ ನೋಡುತ್ತಿದ್ದಾರೆ. ಇಲ್ಲಿಗೂ ಬರುತ್ತಿಲ್ಲ, ಹಾಗೂ ವಿಧಾನ ಪರಿಷತ್ತಿಗೂ ಬರುತ್ತಿಲ್ಲ ಎಂದು ಕೇಳುತ್ತಿದ್ದೇವೆ.

Police Firing at Nagamangala

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿನ್ನೆ ನಾಗಮಂಗಲದಲ್ಲಿ ಗೋಳಿಬಾರು ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಸದಸ್ಯರು ಗೋಳಿಬಾರಾಗಿದೆ ಎನ್ನುವ ವಿಚಾರದ ಬಗ್ಗೆ ಅಡಜರ್ನ್‌ಮೆಂಟು ಮೋಷನ್‌ನನ್ನೇ ತರಬಹುದಾಗಿತ್ತು. ಇದರ ಬಗ್ಗೆ ಸರಕಾರಕ್ಕೆ ಸೂಚನೆ

ಕೊಟ್ಟು ಹೇಳಿಕೆ ಕೊಡಬೇಕೆಂದು ಕೇಳುತ್ತಿದ್ದಾರೆ. ಪೋಲೀಸು ಖಾತೆ ಮಂತ್ರಿಗಳಲ್ಲದಿದ್ದರೂ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಘೋರ್ಪಡೆಯವರು ಇದರ ಬಗ್ಗೆ ಇಲ್ಲಿ ಹೇಳಬಹುದು.

Sri M. Y. GHORPADE.—I have sent word requesting the Hon. Chief Minister to come. Since the issues raised are of a serious nature it would be better if they are raised after the Chief Minister comes. ಮಾನ್ಯ ಮುಖ್ಯ ಮಂತ್ರಿಗಳು ಬರಲಿ ಅವರಿಗೆ ಸಂಬಂಧಪಟ್ಟಿರುವ ವಿಚಾರಗಳು ಇಲ್ಲಿ ಬರುತ್ತಿರುವುದರಿಂದ ಅವರು ತಮಗೆ ಎಲ್ಲ ವಿವರಗಳನ್ನೂ ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್.—ರಾಜ್ಯದಲ್ಲಿ ಒಂದು ಕಡೆ ಗೋಲಬಾರು ಆಗಿದೆ. ಹೀಗಿರುವಾಗ ಇಲ್ಲಿಗೆ ಮಾನ್ಯ ಮುಖ್ಯ ಮಂತ್ರಿಗಳು ಬರಬೇಕಾಗಿತ್ತು. ಈಚೆಗೆ ಮುಖ್ಯ ಮಂತ್ರಿಗಳು ಈ ಸಭೆಗೆ ಬರದೇ ಇರುವುದು ತುಂಬಾ ಬೇಜವಾಬ್ದಾರಿಯುತವಾದದ್ದು ಎಂದು ನಾನು ಹೇಳಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಮುಖ್ಯ ಮಂತ್ರಿಗಳಿಗೆ ಹೇಳಿ ಕಳುಹಿಸಿದ್ದೇನೆಂದು ತಿಳಿಸಿದ್ದಾರೆ. ಅದುವರೆಗೆ ಸ್ವಲ್ಪ ತಡೆದರೆ ಅನುಕೂಲ. ಅವರು ಕೌನ್ಸಿಲ್‌ಗೆ ಹೋಗಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮಲ್ಲಿ ನಾವು ಅರಿಕೆ ಮಾಡುವುದು. ಇಲ್ಲಿಗೆ ಮುಖ್ಯ ಮಂತ್ರಿಗಳು ಬಂದ ಮೇಲೆ ಇದರ ಬಗ್ಗೆ ವಿವರಗಳು ಬಂದಿಲ್ಲ, ಬಂದ ಮೇಲೆ ಹೇಳುತ್ತೇನೆ ಎನ್ನಬಹುದು, ನಾವು ಈ ಪ್ರಸಂಗ ಇಲ್ಲಿ ತರುವಾಗ ಮಾನ್ಯ ಮುಖ್ಯ ಮಂತ್ರಿಗಳ ಇಲಾಖೆಗೆ ಸೇರಿದಂತೆ ರೇಡಿಯೋ ವೈರ್‌ಲೆಸ್ ಇತ್ಯಾದಿ ಸೌಕರ್ಯಗಳಿರಲಾ ಇರುವಾಗ ಅದನ್ನು ಐ. ಜಿ. ಪಿ. ಯವರ ಮೂಲಕ ತರಿಸಿಕೊಡುತ್ತೇನೆ ಎಂದು ಹೇಳಬಹುದು, ಸರಕಾರಕ್ಕೆ ಎಲ್ಲ ಸೌಕರ್ಯಗಳಿರುವಾಗ ಇದರ ಬಗ್ಗೆ ಏಕೆ ಹೇಳಿಕೆ ಬೇಗ ಕೊಡಬಾರದು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನನಗೆ ಇಂದು ಬೆಳಿಗ್ಗೆ ನಾಗಮಂಗಲದ ಘಟನೆ ಬಗ್ಗೆ ಒಂದು ಚೆಲಗ್ರಾಂ ಬಂದಿದೆ.

ಅಧ್ಯಕ್ಷರು.—ಚೆಲಗ್ರಾಂಗಳೇನು ಬರಬಹುದು. ಆದರೆ ಅದರ ಮಾಹಿತಿಗಳನ್ನು ತರಿಸಿಯಾದ ಮೇಲೆ ಇಲ್ಲಿ ಹೇಳಿಕೆ ಕೊಡಲು ಸಾಧ್ಯವಾಗಬಹುದು. ಇಂತಹ ಮಾಹಿತಿಗಳನ್ನು ತರಿಸಲು ಅವರಿಗೆ ಸ್ವಲ್ಪ ಅವಕಾಶ ಕೊಡಬೇಕಾಗುತ್ತದೆ. ಸರಿಯಾದ ಮಾಹಿತಿ ಇಲ್ಲದೆ ಇಲ್ಲಿ ಹೇಳಿಕೆ ಕೊಟ್ಟರೆ ಅದು ಸರಿಯಾಗದೇ ಇರಬಹುದು. ಇದಕ್ಕೆ ನಾನು ತಮ್ಮಲ್ಲಿ ಹೇಳುವುದು ಮುಖ್ಯ ಮಂತ್ರಿಗಳು ಇಲ್ಲಿಗೆ ಬರಲಿ, ಬಂದ ಮೇಲೆ ಇದರ ಬಗ್ಗೆ ಹೇಳಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಗುಂಡಿನೇಟಿನಿಂದ ಇಲ್ಲಿನ ಜನ ತತ್ತರಿಸುತ್ತಿದ್ದಾರೆ. ಇದನ್ನು ನೋಡಿದರೆ ಇಂದು ರಾಜ್ಯದಲ್ಲಿ ಸರಕಾರ ಇದೆಯೋ ಇಲ್ಲವೋ ಎನ್ನುವುದು ಇಲ್ಲಿ ನಿರ್ಧಾರವಾಗಬೇಕು.

ಅಧ್ಯಕ್ಷರು.—ಒಬ್ಬರು ಸದಸ್ಯರು ಹೇಳಿದ್ದನ್ನೇ ನಾಲ್ಕೈದು ಜನ ಮಾನ್ಯ ಸದಸ್ಯರುಗಳು ಮತ್ತೆ ಹೇಳಿದರೆ ಅದರಿಂದ ಏನು ಪ್ರಯೋಜನ ?

ಶ್ರೀ ವಾಟಾಳ್ ನಾಗರಾಜ್.—ಬೇರೆ ವಿಷಯಗಳಿಗಿಂತ ಇದು ಬಹಳ ಪ್ರಾಮುಖ್ಯವಾದುದಾಗಿದೆ.

ಅಧ್ಯಕ್ಷರು.—ತಾವು ಹೇಳುವುದೆಲ್ಲಾ ಪ್ರಾಮುಖ್ಯವಾದುದೇ ಆಗಿದೆ. ಬೇರೆ ಯಾರೂ ಬಡ್ಡೆಟ್ ಮೇಲೆ ಮಾತನಾಡುವುದು ಬೇಡ ಎಂದು ನಿಮ್ಮ ಅರ್ಥವೇ ? ಈ ತರಹದ ಮನೋಭಾವ ತಮ್ಮಲ್ಲಿರುವುದು ಸರಿಯಲ್ಲ. ಮತ್ತು ತಾವು ಹೇಳುವುದೆಲ್ಲಾ ನಡೆಯಬೇಕು ಎಂದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ಪೋಲೀಸ್ ಸ್ಟೇಷನ್‌ನಲ್ಲಿ ಅಮಾನುಷ ಕೃತ್ಯ ನಡೆದಿದೆ. ಇಂತಹ ಪ್ರಕರಣ ಬಂದಾಗಲೆಲ್ಲಾ ಸರ್ಕಾರದವರು ತನಿಖೆ ನಡೆಸುತ್ತೇವೆಂದು ಹೇಳುತ್ತಾರೆ. ಆದರೆ ಇವರ ಮುಖಕ್ಕೆ ಮಂಗಳಾರತಿ.....